# ಕಾಲ್ ಮರ್ಜಿಂಗ್ ಸ್ಕ್ಯಾಮ್




ಸ್ಕ್ಯಾಮ್ ಅಲರ್ಟ್

**ಸೈಬರ್ ಖದೀಮರು ವಂಚನೆಯ ಹೊಸ ಹಾದಿ ತುಳಿದಿರುವ ಬಗ್ಗೆ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಹಾಗೂ ಸೈಬರ್ ಪೊಲೀಸರು ಎಚ್ಚರಿಸಿದ್ದಾರೆ.**

**■ ಶಶಿಕುಮಾರ್ ಸಿ.**

ಸೈಬರ್ ಖದೀಮರು ಜನರನ್ನು ವಂಚಿಸಲು 'ಕಾಲ್ ಮರ್ಜಿಂಗ್ ಸ್ಕ್ಯಾಮ್' ಹಾದಿ ತುಳಿದಿದ್ದು, ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಹಾಗೂ ಸೈಬರ್ ಪೊಲೀಸರು ಅಪರಿಚಿತ ಸಂಖ್ಯೆಯಿಂದ ಒಳಬರುವ ಕರೆಗಳನ್ನು ಮರ್ಜ್ ಮಾಡದಂತೆ ಸಾರ್ವಜನಿಕರನ್ನು ಎಚ್ಚರಿಸಿದ್ದಾರೆ.

ಡಿಜಿಟಲ್ ಸ್ಕ್ಯಾಮ್‌ಗೆ ಸಂಬಂಧಿಸಿದಂತೆ ದಿನಕ್ಕೊಂದು ಮಾರ್ಗವನ್ನು ಕಂಡುಕೊಳ್ಳುವ ಮೂಲಕ ಸ್ಕ್ಯಾಮರ್‌ಗಳು ಜನರಿಂದ ಹಣ ಪೀಕಲು ಒಂದಿಲ್ಲೊಂದು ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ. ಇದರ ಭಾಗವಾಗಿಯೇ ಈ ಕಾಲ್ ಮರ್ಜಿಂಗ್ ಸ್ಕ್ಯಾಮ್. ಈ ಸ್ಕ್ಯಾಮ್‌ನ ಮುಖ್ಯ ಉದ್ದೇಶ ಸಾರ್ವಜನಿಕರ ಬ್ಯಾಂಕ್ ಖಾತೆಯಲ್ಲಿನ ಹಣವನ್ನು ಲಪಟಾಯಿಸುವುದು. ಈ ಬೆನ್ನಲ್ಲೇ 'ಕಾಲ್ ಮರ್ಜಿಂಗ್ ಸ್ಕ್ಯಾಮ್'ಗೆ ಸಂಬಂಧಿಸಿದಂತೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಜನರನ್ನು ಅಲರ್ಟ್ ಆಗಿರುವಂತೆ ಸೈಬರ್ ಪೊಲೀಸರು ಎಚ್ಚರಿಸುತ್ತಿದ್ದಾರೆ.

ಡಿಜಿಟಲ್ ಯುಗದಲ್ಲಿ ಇಂತಹ ಸ್ಕ್ಯಾಮ್ ಬಗ್ಗೆ ತಿಳಿದುಕೊಳ್ಳುವುದು ಹಣಕಾಸಿನ ವಹಿವಾಟುಗಳಿಗೆ ಸಂಬಂಧಿಸಿದ ಪ್ರಮುಖ ಭದ್ರತಾ ಕ್ರಮವಾಗಿದೆ. ಹೀಗಾಗಿ, ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್‌ನ (ಯುಪಿಐ) ನಿರ್ವಹಣೆ ಮಾಡುತ್ತಿರುವ ಎನ್‌ಪಿಸಿಐ ಈ ಬಗ್ಗೆ ತುರ್ತು ಎಚ್ಚರಿಕೆ ನೀಡಲು ಪ್ರಮುಖ ಕಾರಣವಾಗಿದೆ. ಇನ್ನು ಈ ಬಗ್ಗೆ ಎಕ್ಸ್ ಮಾಡಿರುವ ಎನ್‌ಪಿಸಿಐ, ತನ್ನ ಯುಪಿಐ ಗ್ರಾಹಕರು ಈ ಸ್ಕ್ಯಾಮ್ ಬಗ್ಗೆ ಜಾಗರೂಕತೆ ವಹಿಸಬೇಕು ಎಂದಿದೆ. ಜೊತೆಗೆ 'ಸೈಬರ್ ಕಳ್ಳರು ಬ್ಯಾಂಕ್ ಖಾತೆಗೆ ಸಂಬಂಧಿಸಿದ ಒಟಿಪಿಗಳನ್ನು ಬಹಿರಂಗಪಡಿಸಲು ನಿಮ್ಮನ್ನು ಮೋಸಗೊಳಿಸಲು ಕಾಲ್ ಮರ್ಜಿಂಗ್ ವಿಧಾನ ಬಳಸಬಹುದು. ಈ ಬಗ್ಗೆ ಎಚ್ಚರದಿಂದಿರಿ ಮತ್ತು ನಿಮ್ಮ ಹಣವನ್ನು ರಕ್ಷಿಸಿಕೊಳ್ಳಿ' ಎಂದು ಪೋಸ್ಟ್ ಮಾಡಿದೆ.

UNIFIED PAYMENTS INTERFACE

## ಹೇಗೆ ಕಾರ್ಯನಿರ್ವಹಿಸುತ್ತದೆ?

ಈ ಸ್ಕ್ಯಾಮ್‌ನ ರೂಪುರೇಷೆ ದೇಶದ ಯಾವುದೋ ಅಜ್ಞಾತ ಸ್ಥಳದಲ್ಲಿ ರೂಪುಗೊಂಡು, ಅಜ್ಞಾತ ಸಂಖ್ಯೆಯ ಕರೆಯೊಂದಿಗೆ ಪ್ರಾರಂಭವಾಗುತ್ತದೆ. ಅಲ್ಲಿ ಕರೆ ಮಾಡಿದ ವ್ಯಕ್ತಿಯು, ನಿಮ್ಮ ಸ್ನೇಹಿತರು ಅಥವಾ ಬ್ಯಾಂಕ್ ಅಧಿಕಾರಿ ನಿಮ್ಮ ನಂಬರ್ ಕೊಟ್ಟರು ಎಂದು ಹೇಳಿಕೊಂಡು ಜನರನ್ನು ಮಾತಿಗೆಳೆಯುತ್ತಾರೆ. ನಿಮ್ಮ ಸ್ನೇಹಿತರು ಅಥವಾ ಬ್ಯಾಂಕ್ ಅಧಿಕಾರಿ ನಿಮಗೆ ಬೇರೆ ನಂಬರ್‌ನಿಂದ ಕಾಲ್ ಮಾಡುತ್ತಾರೆ, ಅದಕ್ಕಾಗಿ ನೀವು ಈ ಕರೆಯನ್ನು ಮರ್ಜ್ ಮಾಡಬೇಕು ಎಂದು ವಿನಂತಿಸುತ್ತಾರೆ.

ಎರಡನೆಯ ಕರೆ ವಾಸ್ತವವಾಗಿ ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಒಟಿಪಿ ಕರೆಯದ್ದಾಗಿರುತ್ತದೆ. ಒಂದು ವೇಳೆ ನೀವು ನಿಮ್ಮ ಸ್ನೇಹಿತರೇ ಅಥವಾ ಬ್ಯಾಂಕ್ ಅಧಿಕಾರಿಯೇ ಮಾತನಾಡುತ್ತಾರೆ ಎಂದು ಮರ್ಜ್‌ಗೆ ಹಾಕಿ ಲೈನ್‌ನಲ್ಲಿಯೇ ಇದ್ದರೆ ಬಲಿಪಶುವಾಗುವುದಂತೂ ಗ್ಯಾರಂಟಿ. ನೀವು ಕರೆಗಳನ್ನು ಮರ್ಜ್ ಮಾಡಿರುವುದು ಖಾತರಿ ಆಗುತ್ತಿದ್ದಂತೆ ಸ್ಕ್ಯಾಮರ್‌ಗಳು ನಿಮಗೆ ಗೊತ್ತಿಲ್ಲದೆಯೇ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಒಟಿಪಿ ಪಡೆದು, ನಿಮ್ಮ ಖಾತೆಯಿಂದ ಹಣ ಎಗರಿಸುತ್ತಾರೆ.

## ಸುರಕ್ಷತಾ ಕ್ರಮಗಳೇನು?

- ಅಪರಿಚಿತ ಸಂಖ್ಯೆಯಿಂದ ಬರುವ ಕರೆಗಳನ್ನು ಮರ್ಜ್ ಮಾಡದಿರಿ. ಮರ್ಜ್ ಆಗಲು ಅವಕಾಶ ಕೊಡಬೇಡಿ.
- ಅಪರಿಚಿತ ಕರೆಗಳಿಂದ ಮರ್ಜ್ ಬಗ್ಗೆ ವಿನಂತಿ ಬಂದಾಗ ಎಚ್ಚರವಹಿಸಿ.
- ಕರೆ ಮಾಡಿದ ಸಂಖ್ಯೆ ಕಾನೂನುಬದ್ಧವೇ ಎಂದು ಪರಿಶೀಲಿಸಿ.
- ಆ ಕರೆ ಬ್ಯಾಂಕ್ ಅಥವಾ ನಿಮಗೆ ಗೊತ್ತಿರುವ ಜನರದ್ದೇ ಎಂದು ದೃಢಪಡಿಸಿಕೊಳ್ಳಿ.
- ಅನುಮಾನಾಸ್ಪದ ನಡೆಗಳು ಕಂಡು ಬಂದಲ್ಲಿ ರಿಪೋರ್ಟ್ ಮಾಡಿ.
- ಒಟಿಪಿ ಖಾಸಗಿ ವಿಚಾರ. ಇದನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳದಂತೆ ನಿಗಾವಹಿಸಿ.
- ಅಪರಿಚಿತ ಕರೆಗಳ ಬಗ್ಗೆ ಅನುಮಾನ ಬಂದರೆ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಮಾಡುವ ಸಹಾಯವಾಣಿ 1930ಕ್ಕೆ ಕರೆ ಮಾಡಿ, ವರದಿ ಮಾಡಿ. ■